ಎಲ್.ಎ.ಸಿ.ನಂ. 1039/2021
ಪಿ.ಡಬ್ಲ್ಯೂ: 01

**<u>ಸಾಕ್ಷಿಯನ್ನು ಇಂದು ದಿ.28.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.SMB ವಕೀಲರಿಂದ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸಂಪೂರ್ಣ ಸತ್ಯವಾಗಿರುತ್ತವೆ.

**ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

ನಾನು ಈ ಕೆಳಗಿನಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| ಅ. ನಂ | ದಾಖಲೆಗಳ ವಿವರ | ನಿಶಾನೆ |
|---|---|---|
| 1 | ರೆಫರೆನ್ಸ ಅರ್ಜಿ ಮತ್ತು ತಿದ್ದುಪಡಿ ರೆಫರೆನ್ಸ ಅರ್ಜಿ | 1 & 1 ಎ |
| 2 | ದಿನಾಂಕ: 20.07.2016 ರ ಅಲಕೊಪ್ಪರ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 2 |
| 3 | ದಿನಾಂಕ: 23.05.2017 ರ ಬಿದರಕುಂದಿ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 3 |
| 4 | ಮುದ್ದೇಬಿಹಾಳ ತಾಲೂಕಾ ನಕಾಶೆಯ ದೃಢೀಕೃತ ನಕಲು | 4 |

ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು: ಎದುರುದಾರರ ಪರವಾಗಿ:</u>**

1) ನನ್ನ ಜಮೀನು ಸರ್ವೆ ನಂ.11/p1 ಇದ್ದು, ಅದು ಒಟ್ಟು 03 ಎಕರೆ 21 ಗುಂಟೆ ಜಮೀನು ಇದ್ದು, ಅದರಲ್ಲಿ 01 ಎಕರೆ 18 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ. 1 ನೇ ಎದುರುದಾರರು ಒಟ್ಟು 4 ಜನರ ಹೆಸರಿನಲ್ಲಿ ಐತೀರ್ಪು ಘೋಷಿಸಿರುತ್ತಾರೆ ಎನ್ನುವುದು ನಿಜ. ನಾನೊಬ್ಬನೇ ನಿ.ಪಿ.1 ರಂತೆ ರೆಫರೆನ್ಸ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎನ್ನುವುದು ನಿಜ. ನನ್ನ ಮಾಲೀಕತ್ವದ 1 ಎಕರೆ 18 ಗುಂಟೆ ಜಮೀನು ಸ್ವಾಧೀನಗೊಂಡಿರುವ ಕುರಿತು ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ಸಾಕ್ಷಿ ಮುಂದುವರೆದು 1 ನೇ ಎದುರುದಾರರು ಪ್ರತ್ಯೇಕ ಆದೇಶ ಹೊರಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಆದೇಶವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ.

2) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು

ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಅಲಕರೊಪ್ಪರ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

4) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ನನ್ನ ಜಮೀನು ನೀರಾವರಿ ಜಮೀನು ಇರುತ್ತದೆ. ನನ್ನ ಜಮೀನು ನೀರಾವರಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ.

5) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸಲು ಎ.ಪಿ.ಎಮ್.ಸಿಯಿಂದಾಗಲಿ ಅಥವಾ ಬೆರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

6) 1 ನೇ ಎದುರುದಾರರು ಐತೀರ್ಪು ಘೋಷಿಸುವ ಕಾಲಕ್ಕೆ ನಿ.ಪಿ.1 ನ್ನು ಪರಿಗಣಿಸಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನಿ.ಪಿ.2 10 ಗುಂಟೆ ಜಮೀನಿಗೆ ಸಂಬಂಧಿಸಿದ ಖರೀದಿ ಪತ್ರ ಎನ್ನುವುದು ನಿಜ. ಅಲಕೊಪ್ಪರ ಗ್ರಾಮದಲ್ಲಿ ಸಾಕಷ್ಟು ಜಮೀನುಗಳ ಖರೀದಿ ಪತ್ರಗಳು ಆಗಿರುತ್ತವೆ ಎನ್ನುವುದು ನಿಜ.

7) ನಿ.ಪಿ.2 ಮತ್ತು 3 ಅಲಕೊಪ್ಪರ ಹಾಗೂ ಬಿದರಕುಂದಿ ಗ್ರಾಮದ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ನಾನು ಹಾಜುರಪಡಿಸಿದ ಖರೀದಿ ಪತ್ರದ ಜಮೀನುಗಳನ್ನು ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.3 ರ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 15-18 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 6 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಅಲಕೊಪ್ಪರ ಗ್ರಾಮದಿಂದ ಬಿದರಕುಂದಿ ಗ್ರಾಮಕ್ಕೆ ಹೋಗಬೇಕಾದರೆ ರೂಡಗಿ ಮತ್ತು ಬಸರಕೋಡ ಗ್ರಾಮದ ಮೂಲಕ ಹೋಗಬೇಕಾಗುತ್ತದೆ ಎನ್ನುವುದು ನಿಜ. ಅಲಕೊಪ್ಪರ ಗ್ರಾಮದಿಂದ ರೂಡಗಿ ಗ್ರಾಮ 6 ಕಿಮೀ ದೂರದಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ 2 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ರೂಡಗಿ ಗ್ರಾಮದಿಂದ ಬಿದರಕುಂದಿ ಗ್ರಾಮ 10

ಕಿಮೀ ದೂರದಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ 5 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ.

8) 1 ನೇ ಎದುರುದಾರರು ನಮ್ಮ ಊರು ಅಲಕೊಪ್ಪರ ಗ್ರಾಮದ ಎಲ್ಲ ಜಮೀನುಗಳ ಮಾರುಕಟ್ಟೆ ಬೆಲೆಯ ಅಂಕಿ-ಅಂಶಗಳನ್ನು ಪರಿಗಣಿಸಿ ನನ್ನ ಜಮೀನಿಗೆ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅಲಕೊಪ್ಪರ ಗ್ರಾಮದಲ್ಲಿ ಸಾಕಷ್ಟು ಜಮೀನುಗಳು ಖರೀದಿಯಾಗಿದ್ದು, ಅವುಗಳು ಕಡಿಮೆ ಬೆಲೆಗೆ ಖರೀದಿಯಾಗಿರುವ ಕಾರಣ ನಾನು ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ನಾನು ಅಲಕೊಪ್ಪರ ಗ್ರಾಮದ ಎಲ್ಲಾ ಖರೀದಿ ಪತ್ರಗಳನ್ನು ಹಾಗೂ ಖರೀದಿ ಒಪ್ಪಂದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು 3 ಖರೀದಿ ಪತ್ರಗಳು ನನ್ನ ಪ್ರಕರಣಕ್ಕೆ ಪೂರಕವಾದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಅಲಕೊಪ್ಪರ ಗ್ರಾಮದ ಸ.ನಂ.6/1, 6/2 ಅ ಜಮೀನುಗಳು ನಮ್ಮ ಜಮೀನಿನ ಪಕ್ಕದಲ್ಲಿಯೇ ಇವೆ ಎನ್ನುವುದು ನಿಜ. ಸದರಿ ಜಮೀನುಗಳ ಖರೀದಿ ಪತ್ರಗಳನ್ನು ಪರಿಗಣಿಸಿ ನಮ್ಮ ಜಮೀನಿಗೂ ಸಹ ಸೂಕ್ತ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

9) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತೋರಿಸಿದ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎಂದರೆ ಸರಿ. ನಾನು ಒಂದು ಎಕರೆಗೆ 80 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.